**ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಜೇವರ್ಗಿ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 296/2018 |

ದಿನಾಂಕ 08.04.2025 ರಂದು ಸಾಕ್ಷಿಗೆ ಕರೆಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ಶಿವಾನಂದ |
| ತಂದೆಯ ಹೆಸರು | ಸಂಗಪ್ಪ ನಡುವಿನಮನಿ |
| ವಯಸ್ಸು | 65 ವರ್ಷಗಳು |
| ಉದ್ಯೋಗ | ನಿವೃತ ಪಿಎಸ್ಐ |
| ವಾಸಸ್ಥಳ | ವಿಜಯಪೂರ |

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.</u>**

ದಿನಾಂಕ 06.06.2016 ಮೇ-2017 ರವರೆಗೆ ನೆಲೋಗಿ ಪೊಲೀಸ ಠಾಣೆಯಲ್ಲಿ ಪಿ.ಎಸ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 02.04.2017 ರಂದು ಬೆಳಿಗ್ಗೆ 5.00 ಗಂಟೆಗೆ ನಾನು, ಚಾಸಾ-4 ರಿಂದ 7 ರವರು ಗಸ್ತು ಕರ್ತವ್ಯದಲ್ಲಿದ್ದಾಗ ಅಂಕಲಗಾ ಸೀಮಾಂತರದ ರಾಜಭಕ್ಷ ದರ್ಗಾದ ಹತ್ತಿರ ಅಕ್ರಮವಾಗಿ ಸಂಗ್ರಹಿಸಿದ ಮರಳನ್ನು ಜೆಸಿಬಿ ಟಿಪ್ಪರಗಳಲ್ಲಿ ತುಂಬುತ್ತಿದ್ದಾರೆಯಿ ಎಂದು ಮಾಹಿತಿ ಬಂತು. ನಂತರ ಸಿಬ್ಬಂದಿಗೆ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ರವರನು ಬರಮಾಡಿಕೊಂಡು ಸಿಬ್ಬಂದಿಯಾದ ಚಾಸಾ-4 ರಿಂದ 7 ಹಾಗೂ ಪಂಚರೊಂದಿಗೆ ಬೆಳಿಗ್ಗೆ 06-00 ಕ್ಕೆ ಅಂಕಲಗಾ ಗ್ರಾಮದ ಕೆಇಬಿ ಕಚೇರಿ ಮುಂದೆ ರಸ್ತೆಯ ಮುಂದೆ ನಿಂತು ನೋಡಲಾಗಿ ಅಲ್ಲಿ ಜೆಸಿಬಿಯಿಂದ ಟಿಪ್ಪರಗಳಲ್ಲಿ ತುಂಬುತಿದ್ದರು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಇಡಿ ಟಿಪ್ಪರಗಳನ್ನು ಅಲ್ಲೆ ಬಿಟ್ಟು ಓಡಿ ಹೋಗಿರುತ್ತಾರೆ. ಟಿಪ್ಪರಗಳನ್ನು ನೋಡಲಾಗಿ 02 ಟಿಪ್ಪರಗಳಲ್ಲಿ ಮರಳು ತುಂಬಿತ್ತು ಇನ್ನುಳಿದ 04 ಟಿಪ್ಪರಗಳಿದ್ದವು. ಸದರಿ ಟಿಪ್ಪರ ನಂ.KA-35/B-3901, KA No.32/C-7156, KA No.32/C-7105 ಇನ್ನೊಂದು ಟಿಪ್ಪರ ನಂಬರ ನನಗೆ ನೆನಪಿಲ್ಲ. ಸದರಿ ಟಿಪ್ಪರಗಳನ್ನು ಮುಂಜಾನೆ 6.15 ರಿಂದ 7.15 ರವರೆಗೆ ಪಂಚನಾಮೆ ಜರುಗಿಸಿ ವಶಪಡಿಸಿಕೊಳ್ಳಲಾಯಿತು. ನಂತರ ಠಾಣೆಗೆ ಬಂದು ಚಾಸಾ-9 ರವರಿಗೆ ವರದಿ, ಪಂಚನಾಮೆ ಮತ್ತು ಟಿಪ್ಪರಗಳನ್ನು ಮುಂದಿನ ಕ್ರಮಕ್ಕಾಗಿ ನೀಡಲಾಯಿತು. ಈಗ ನಾನು ಪಂಚನಾಮೆಯನ್ನು

ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ನಾನು 29 ಫೋಟೊಗಳನ್ನು ನೋಡುತ್ತಿದ್ದು ಅವುಗಳಲ್ಲಿ ಕಾಣುತ್ತಿರುವ ಟಿಪ್ಪರಗಳನ್ನು ಆ ದಿನ ನಾವು ವಶಪಡಿಸಿಕೊಂಡೆವು. ಸದರಿ ಫೋಟೋಗಳನ್ನು ನಿಪಿ-3 ರಿಂದ 31 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುः ಆರೋಪಿ ಪರ ವಕೀಲರಿಂದ</u>

ನಾನು ದೂರು ದಾಖಲಿಸುವ ಮುಂಚೆ ನಾನು ಭೂ ಮತ್ತು ಗಣಿ ವಿಜ್ಞಾನ ಇಲಾಖೆಯಿಂದ ಪರವಾನಿಗೆ ಪಡೆದಿಲ್ಲ. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಆರೋಪಿತರು ಪರವಾನಿಗೆ ಪಡೆದ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ನಾನು ಗಸ್ತು ಕರ್ತವ್ಯದಲ್ಲಿದ್ದ ಬಗ್ಗೆ ನಾನು ಡೈರಿಯನ್ನು ಹಾಜರುಪಡಿಸಿಲ್ಲ. ದೂರಿನಲ್ಲಿ ಒಂದು ತಿದ್ದುಪಡಿಯಿದ್ದು ಅದರಲ್ಲಿ ಯಾವುದೆ ತಿದ್ದುಪಡಿಯ ಚಿಕ್ಕರುಜು ಮಾಡಿಲ್ಲ ಈ ಕುರಿತು ನಾನು ಯಾವುದೆ ವಿವರಣೆ ನೀಡಿರುವುದಿಲ್ಲ. ನಿಪಿ-3 ರಿಂದ 31 ರಲ್ಲಿ ಕಾಣುವ ಟಿಪ್ಪರಗಳು ಯಾರಿಗೆ ಸಂಬಂಧಿಸಿದ್ದ ಮತ್ತು ಅವುಗಳ ಮಾಲಿಕತ್ವದ ಬಗ್ಗೆ ಯಾವುದೆ ವಿವರಣೆ ಇರುವುದಿಲ್ಲ ಎಂದರೆ ಸರಿ. ನಿಪಿ-3 ರಿಂದ 31 ರಲ್ಲಿ ಯಾವ ಸ್ಥಳ ಮತ್ತು ಯಾವ ದಿನಾಂಕದಂದು ತೆಗೆದಿರುತ್ತೇವೆ ನಮೂದಿಸಿಲ್ಲ ಎಂದರೆ ಸರಿ. ಆದರೆ ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಗುನ್ನೆ ಬಳಸಲಾದ ಜೆಸಿಬಿಗೆ ಸಂಬಂಧಿಸಿದಂತೆ ಯಾವುದೆ ಭಾವಚಿತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ವಶಪಡಿಸಿಕೊಂಡ ಟಿಪ್ಪರಗಳನ್ನು ಯಾರು ಟಿಪ್ಪರಗಳನ್ನು ಹಾಗೂ ಜೆಸಿಬಿಯನ್ನು ಠಾಣೆಗೆ ತಂದರು ಮತ್ತು ಎಷ್ಟು ಅವದಿಯೊಳಗೆ ತಂದರು ಎಂದು ನಮೂದಿಸಿಲ್ಲ ಎಂದರೆ ಸರಿ.

ಪಂಚನಾಮೆ ಕಾಲಕ್ಕೆ ಯಾವ ಸಾಧನದಿಂದ ಮರಳನ್ನು ಅಳೆದಿರುತ್ತೀರಿ ಮತ್ತು ಎಷ್ಟು ಪ್ರಮಾಣದಲ್ಲಿ ಮರಳು ಇತ್ತು, ಅದರ ಮೌಲ್ಯ ಎಷ್ಟು ಇತ್ತು ಎಂದು ನಮೂದ್ದೀರಿ ಎಂದರೆ ಸಾಕ್ಷಿ ಪಂಚನಾಮೆ ಕಾಲಕ್ಕೆ 02 ಟಿಪ್ಪರಗಳಲ್ಲಿ ಮರಳು ಇತ್ತು ಮತ್ತು ಅದರ ಮೌಲ್ಯವನ್ನು ಅಂದಾಜಿನ ಮೇಲೆ ಬರೆದಿರುತ್ತೇನೆ ಎಂದು ನುಡಿಯುತ್ತಾರೆ.

ನಾವು ಪಂಚರನ್ನು ಕರೆದುಕೊಂಡು ಹೋಗಿ ದಾಳಿ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಪಂಚನಾಮೆ ಜರುಗಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ

ಎಂದರೆ ಸರಿಯಲ್ಲ. ನಾನು ಸುಳ್ಳು ಪಿರ್ಯಾಧಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ